**ದಿನಾಂಕಃ 06-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದಃ-**

3. ಕಾನಗೋಡು ಗ್ರಾಮ ಪಂಚಾಯತಿಯಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ಗ್ರಾಮ ಸ್ವಚ್ಛ ಯೋಜನೆ ಬಿಟ್ಟು ಬೇರೆ ಬಹಳಷ್ಟು ಯೋಜನೆಗಳ ಅಡಿಯಲ್ಲಿ ಚೆಕ್ಕುಗಳು ವಿತರಣೆ ಆಗಿವೆ ಎಂದರೆ ಇರಬಹುದು. ಆದರೆ ನಾನು ಹೇಳಿರುವ ಚೆಕ್ಕು ಈ ಪ್ರಕರಣಕ್ಕೆ ಮಾತ್ರ ಸಂಬಂಧಪಟ್ಟಿದೆ. ಶಿರಸಿಯ ಜಿಲ್ಲಾ ಪಂಚಾಯತಿ ಕಚೇರಿಯಿಂದ ಕಾನಗೋಡು ಗ್ರಾಮ ಪಂಚಾಯತಿಗೆ ಹಣ ಬಿಡುಗಡೆ ಆಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಪಡೆದಿರುವ ಚೆಕ್ಕು ಗ್ರಾಮ ಸ್ವಚ್ಛ ಯೋಜನೆಗೆ ಸಂಬಂಧಪಟ್ಟಿದೆ ಎಂದು ಎಲ್ಲಿಯೂ ಉಲ್ಲೇಖ ಇಲ್ಲ ಎಂದರೆ ಚೆಕ್ಕಿನಲ್ಲಿ ಅದನ್ನು ಉಲ್ಲೇಖ ಮಾಡುವುದಿಲ್ಲ. ಸ್ವಚ್ಛ ಗ್ರಾಮ ಯೋಜನೆಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಕಡತವನ್ನು ನಾನು ಪರಿಶೀಲನೆ ಮಾಡಿದ್ದೇನೆ. ಯಾವ ಕಾಮಗಾರಿಗೆ ಹಣ ಮಂಜೂರು ಆಯಿತು ಯಾರಿಗೆ ಮಂಜೂರು ಆಯಿತು ಇತ್ಯಾದಿ ವಿವರ ಹಾಗೂ ಅದರ ಒಟ್ಟು ಮೊತ್ತ ಎಷ್ಟು ಮತ್ತು ಆ ಹಣದ ಬಟವಾಡೆಗೆ ಯಾವ ಚೆಕ್ಕನ್ನು ನೀಡಲಾಗಿದೆ ಎಂಬುದು ಸದರಿ ಯೋಜನೆಯ ಕಡತದಲ್ಲಿ ಇರುತ್ತದೆ. ಆ ಕಡತವನ್ನು ನಾನು ಪಡೆದುಕೊಂಡಿಲ್ಲ. ಈ ಪ್ರಕರಣದಲಿ ನಾನು ಹಾಜರುಪಡಿಸಿರುವ ಚೆಕ್ಕಿಗೆ ಮತ್ತು ಆ ಕಡತಕ್ಕೆ ತಾಳೆ ಆಗದೇ ಇದ್ದುದರಿಂದ ನಾನು ಕಡತವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮಾದರಿ ಸಹಿಗಳನ್ನು ಪಡೆಯಲು ಸಿದ್ದಾಪುರ ತಹಶೀಲ್ದಾರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ನಾನು ಪತ್ರ ಬರೆದೆ ಎಂದು ಹೇಳಿದ್ದು ಅವರು ಆರೋಪಿಗಳ ಮಾದರಿ ಸಹಿಗಳನ್ನು ಸಂಗ್ರಹಿಸಿರುವುದಿಲ್ಲ, ಅವರಿಗೆ ಇಬ್ಬರು ಪಂಚರನ್ನು ಕಳುಹಿಸಿಕೊಡುವಂತೆ ವಿನಂತಿ ಪತ್ರವನ್ನು ಬರೆದಿರುತ್ತೇನೆ. 1 ನೇ ಆರೋಪಿಯ ಮಾದರಿ ಸಹಿಗಳನ್ನು ನಾನು ಕಾನಗೋಡು ಗ್ರಾಮ ಪಂಚಾಯತಿ ಕಚೇರಿಯಲ್ಲಿ ಪಡೆದಿರುತ್ತೇನೆ. ದೋಸಾ-5 ಮತ್ತು 6 ರವರು ಪಂಚರಾಗಿ ತಾಲೂಕು ಪಂಚಾಯತಿ ಕಚೇರಿಗೆ ಬಂದರು ಅಲ್ಲಿಂದ ಅವರಿಗೆ ಕಾನಗೋಡು ಗ್ರಾಮ ಪಂಚಾಯತಿ ಕಚೇರಿಗೆ ಬರುವಂತೆ ನನ್ನ ಸಿಬ್ಬಂದಿ ಮೂಲಕ ಹೇಳಿ ಕರೆಸಿದೆ. ಮುಖ್ಯ ವಿಚಾರಣೆಯಲ್ಲಿ ದೋಸಾ-5 ಮತ್ತು 6 ರವರು ತಾಲೂಕು ಪಂಚಾಯತಿ ಕಚೇರಿಗೆ ಬಂದರು ಎಂದು ಹೇಳಿರುವುದನ್ನು ಬಿಟ್ಟರೆ ಅವರು ಕಾನಗೋಡು ಗ್ರಾಮ ಪಂಚಾಯತಿ ಕಚೇಗೆ ಅಲ್ಲಿಂದ ಬಂದರು ಎಂದು ನಾನು ಹೇಳಿಲ್ಲ ಎಂದರೆ ಸರಿಯಲ್ಲ. ನಿಪಿ-115 ರಿಂದ 117 ಚೆಕ್ಕುಗಳಲ್ಲಿ ಇರುವ ರುಜುಗಳು ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ. ನಾನು ಮಾದರಿ ಸಹಿಗಳನ್ನು ಪಡೆಯುವಾಗ ಪಾಲನೆ ಮಾಡಬೇಕಾಗಿರುವ

ನಿಯಮಗಳನ್ನು ಪಾಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪಡೆದುಕೊಂಡೆ ಎಂದು ಹೇಳಿರುವ ಚೆಕ್ಕು ಮತ್ತು Withdrawal slip ಗೆ ಹಾಗೂ ಈ ಪ್ರಕರಣಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಯಾವುದೇ ತನಿಖೆ ಮಾಡಿಲ್ಲ ಮತ್ತು ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ